# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | :: | **1260** |
| **ಸದಸ್ಯರ ಹೆಸರು** | :: | **ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | :: | **17.03.2021** |
| **ಉತ್ತರಿಸುವ ಸಚಿವರು** | :: | **ಪಶುಸಂಗೋಪನೆ ಸಚಿವರು** |

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿ ಎಷ್ಟು ಪಶುಸಂಗೋಪನಾ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿರುತ್ತವೇ;</td><td>ರಾಜ್ಯದಲ್ಲಿ ಕೇವಲ ಏಕೈಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನಲ್ಲಿ ಸ್ಥಾಪನೆಗೊಂಡಿದ್ದು 2005 ರಿಂದ ತನ್ನ ಕಾರ್ಯಾರಂಭ ಮಾಡಿರುತ್ತದೆ.</td></tr>
<tr><td>ಆ)</td><td>ಈ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ಎಷ್ಟು ವಿದ್ಯಾರ್ಥಿಗಳು ಪದವಿ ಮುಗಿಸಿ ಹೊರ ಬರುತ್ತಿದ್ದಾರೆ;</td><td>ಈ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ಸ್ನಾತಕ ಪದವೀಧರರು ಈ ಕೆಳಕಂಡಂತೆ ಪದವಿ ಮುಗಿಸಿ ಹೊರ ಬರುತ್ತಿದ್ದಾರೆ.
<table>
<tr><th>ಕ್ರಸಂ</th><th>ಪದವಿ</th><th>ಒಟ್ಟು ವಿದ್ಯಾರ್ಥಿ</th></tr>
<tr><td>01</td><td>ಪಶುವೈದ್ಯಕೀಯ</td><td>269</td></tr>
<tr><td>02</td><td>ಹೈನುಗಾರಿಕೆ</td><td>61</td></tr>
<tr><td>03</td><td>ಮೀನುಗಾರಿಕೆ</td><td>42</td></tr>
<tr><td></td><td>ಒಟ್ಟು</td><td>372</td></tr>
</table></td></tr>
<tr><td>ಇ)</td><td>ಈ ವಿಶ್ವವಿದ್ಯಾಲಯದಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ; ಇವುಗಳಲ್ಲಿ ಖಾಲಿ ಹುದ್ದೆಗಳೆಷ್ಟು;</td><td>ವಿಶ್ವವಿದ್ಯಾಲಯದಲ್ಲಿ ಒಟ್ಟಾರೆ ಸಿಬ್ಬಂದಿಗಳ ಸಂಖ್ಯೆ, ನೇಮಕಗೊಂಡ ಸಿಬ್ಬಂದಿ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತವೆ.
<table>
<tr><th>ಹುದ್ದೆ</th><th>ಮಂಜೂರಾದ ಹುದ್ದೆ</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಇರುವ ಹುದ್ದೆಗಳು</th></tr>
<tr><td>ಬೋಧಕ</td><td>715</td><td>245</td><td>470</td></tr>
<tr><td>ಬೋಧಕೇತರ</td><td>1384</td><td>256</td><td>1128</td></tr>
</table></td></tr>
<tr><td>ಈ)</td><td>ರಾಜ್ಯದ ಅವಶ್ಯಕತೆಗೆ ಅನುಗುಣವಾಗಿ ವಿದ್ಯಾರ್ಥಿಗಳು ಪದವಿ ಮುಗಿಸಿ ಹೊರ ಬರುತ್ತಿದ್ದಾರೆಯೇ;</td><td>ರಾಜ್ಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ವಿದ್ಯಾರ್ಥಿಗಳು ಪದವಿ ಮುಗಿಸಿ ಹೊರ ಬರುತ್ತಿದ್ದಾರೆ.</td></tr>
</table>

| | | |
|---|---|---|
| ಉ) | ಈ ವಿಶ್ವವಿದ್ಯಾಲಯದಲ್ಲಿ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? | ಈ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ ಸಂಬಂಧ ಸರ್ಕಾರವು ದಿನಾಂಕ 11-12-2019 ರಂದು ನೇಮಕಾತಿ ಅಧಿಸೂಚನೆಗೆ ಅನುಮತಿಯನ್ನು ನೀಡಿರುತ್ತದೆ. ಆದರೆ ಸದರಿ ನೇಮಕಾತಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಆರ್ಥಿಕ ಮಿತವ್ಯಯದ ಹಿನ್ನಲೆಯಲ್ಲಿ ಸರ್ಕಾರವು ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದಿರುತ್ತದೆ. ಪುನ: ವಿಶ್ವವಿದ್ಯಾಲಯವು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮತಿ ನೀಡುವಂತೆ ಕೋರಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯು ಅನುಮತಿ ನೀಡಿದ ಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು. |

ಸಂಖ್ಯೆ: ಪಸಂಮೀ ಇ-51 ಪಅಸೇ 2021

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು